(18)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ಇವರ ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಪರಿಸರ ಮತ್ತು ಜೀವಿಪರಿಸ್ಥಿತಿ ಹಾಗೂ ಪ್ರವಾಸೋದ್ಯಮ ಸಚಿವರ ಉತ್ತರ:

ವಿಷಯ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ **consent for operation** ನ್ನು ಪಡೆಯಲು ಹಸಿರು, ಕೇಸರಿ ಮತ್ತು ಕೆಂಪು ವರ್ಗಗಳಿಗೆ ಅನುಮತಿ ನೀಡುತ್ತಿದ್ದು, ಹಾಲಿ ಎಲ್ಲಾ ವರ್ಗಗಳ ಬದಲಾಗಿ ಏಕರೂಪವಾಗಿ ಶುಲ್ಕ ವಿಧಿಸಲಾಗುತ್ತಿದ್ದು, ಇದರಲ್ಲಿ ಆರೆಂಜ್ ವರ್ಗದವರಿಗೆ ಹೊರೆ ಹೆಚ್ಚಾಗುತ್ತಿರುವುದು ಕೋವಿಡ್ ಪೆಂಡಮಿಕ್ ಪರಿಸ್ಥಿತಿಯಲ್ಲಿ ಕಾರ್ಖಾನೆಗಳನ್ನು ನಡೆಸುವುದೇ ದುಸ್ಥರವಾಗಿರುವುದರಿಂದ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ಮಾನ್ಯ ಪರಿಸರ ಹಾಗು ಜೀವಿಶಾಸ್ತ್ರ ಸಚಿವರ ಗಮನ ಸೆಳೆಯ ಬಯಸುತ್ತೇನೆ.

***

ಸರ್ಕಾರದ ಉತ್ತರ:

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವ್ಯಾಪ್ತಿಗೆ ಒಳಪಡುವ ಕೈಗಾರಿಕೆಗಳಿಗೆ/ಉದ್ದಿಮೆಗಳಿಗೆ/ಸಂಸ್ಥೆಗಳಿಗೆ ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1974 ಹಾಗು ವಾಯು (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1981 ರಡಿಯಲ್ಲಿ ಕಲ್ಪಿಸಲಾದ ಅವಕಾಶಗಳನ್ವಯ ಸ್ಥಾಪನಾ ಸಮ್ಮತಿ ಪತ್ರ/ಚಾಲನಾ ಸಮ್ಮತಿ ಪತ್ರವನ್ನು ("Consent for operation/Consent to Establish") ನೀಡಲು ಕೈಗಾರಿಕೆಗಳ ಬಂಡವಾಳ ಹೂಡಿಕೆಯನ್ನು ಆಧರಿಸಿ ಸಮ್ಮತಿ ಶುಲ್ಕವನ್ನು ಮಂಡಳಿ ಪತಿಯಿಂದ ವಿಧಿಸಲಾಗುತ್ತಿದೆ. ಈ ಸಂಬಂಧ ಉದ್ದಿಮೆಗಳು/ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ಸಮ್ಮತಿ ಅರ್ಜಿಯನ್ನು ನಿಗದಿತ ಸಮ್ಮತಿ ಶುಲ್ಕದೊಂದಿಗೆ ಮಂಡಳಿಗೆ ಸಲ್ಲಿಸಿದ ನಂತರ ಉದ್ದಿಮೆಗಳ ಪರಿವೀಕ್ಷಣೆ ಮತ್ತು ಅರ್ಜಿ ವಿಲೇವಾರಿಗಾಗಿ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ, 1974 ರಡಿಯಲ್ಲಿ ಸ್ಥಾಪನೆಗೊಂಡಿದ್ದು, ಮೊಟ್ಟ ಮೊದಲ ಬಾರಿಗೆ ಸಮ್ಮತಿ ಅರ್ಜಿಗಳಿಗೆ ಸಮ್ಮತಿ ಶುಲ್ಕವನ್ನು ಕರ್ನಾಟಕ ಜಲ (ನಿಯಂತ್ರಣ ಮತ್ತು ನಿವಾರಣೆ) ನಿಯಮಗಳಡಿಯಲ್ಲಿ 1983 ರಲ್ಲಿ ಅಧಿಸೂಚಿಸಲಾಗಿದ್ದು, ನಂತರ 1991, 1996 & 1998 ರಲ್ಲಿ ಸಮ್ಮತಿ ಶುಲ್ಕವನ್ನು ಪರಿಷ್ಕರಿಸಲಾಗಿರುತ್ತದೆ. ತದನಂತರ, ಪರಿಸರ (ಸಂರಕ್ಷಣಾ) ಕಾಯ್ದೆ, 1986 ರಡಿಯಲ್ಲಿ ವಿವಿಧ ತ್ಯಾಜ್ಯ ನಿಯಮಾವಳಿಗಳು ಅಧಿಸೂಚನೆಗೊಂಡಿದ್ದರೂ ಸಹ ಈ ನಿಯಮಗಳಡಿಯಲ್ಲಿ ನೀಡಲಾಗುವ ಅಧಿಕೃತ ಪತ್ರಗಳಿಗಾಗಲೀ/ ನೋಂದಣಿ ಪತ್ರಗಳಿಗಾಗಲೀ ಮಂಡಳಿಯಿಂದ ಯಾವುದೇ ಶುಲ್ಕವನ್ನು ವಿಧಿಸಲಾಗುತ್ತಿಲ್ಲ. ಮಂಡಳಿಯ ಕೆಲಸ ಕಾರ್ಯ ಹೆಚ್ಚಾಗುತ್ತ ಹೋಗುತ್ತಿದ್ದರೂ 20 ವರ್ಷಗಳವರೆಗೂ ಸಮ್ಮತಿ ಶುಲ್ಕ ಪರಿಷ್ಕರಣೆ ಮಾಡಿರುವುದಿಲ್ಲ. ಇತರ ರಾಜ್ಯಗಳಲ್ಲಿ ಈ ಕುರಿತು ಪರಿಶೀಲಿಸಿದಾಗ ಅಲ್ಲಿ ಕಾಲ ಕಾಲಕ್ಕೆ ಸಮ್ಮತಿ ಶುಲ್ಕ ಪರಿಷ್ಕರಣೆಯಾಗುತ್ತಿರುತ್ತದೆ. ಇದನ್ನು ಗಮನಿಸಿ ಹಾಗೂ ಹೊಸ ನಿಯಮಾವಳಿಗಳನ್ನು ಜಾರಿಗೊಳಿಸುವಲ್ಲಿ ಹೆಚ್ಚುತ್ತಿರುವ ಖರ್ಚು ವೆಚ್ಚಗಳನ್ನು ಭರಿಸಲು ಮಂಡಳಿಯಿಂದ ಸಮ್ಮತಿ ಶುಲ್ಕ ಪರಿಷ್ಕರಣೆಗೆ 2016 ರಲ್ಲಿ iDeck (Infrastructure Development Corporation (Karnataka) Limited) ಸಂಸ್ಥೆಗೆ "Assessment of Consent fee keeping in view of objectives of the Board" ಅಧ್ಯಯನವನ್ನು ನಡೆಸಲು ವಹಿಸಿಕೊಡಲಾಗಿರುತ್ತದೆ. ಅದರಂತೆ, iDeck ಸಂಸ್ಥೆಯು ಚಾಲ್ತಿಯಲ್ಲಿರುವ ಹಣದುಬ್ಬರ/Consumer Price Index ಹಾಗೂ ಇತರ ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ ಸಮ್ಮತಿ ಶುಲ್ಕಗಳನ್ನು ಪರಿಶೀಲಿಸಿ, 1998 ರಲ್ಲಿದ್ದ ಸಮ್ಮತಿ ಶುಲ್ಕವನ್ನು ಪರಿಷ್ಕರಣೆ ಮಾಡಿದ ಶಿಫಾರಸ್ಸನ್ನು ಮಂಡಳಿಗೆ ಸಲ್ಲಿಸಿರುತ್ತದೆ.

iDeck ಸಂಸ್ಥೆಯ ವರದಿಯನ್ನಾಧರಿಸಿ ಹಾಗೂ ಸರ್ಕಾರದ ಸಲಹೆಯಂತೆ Consumer Price Index ನ್ನು ಗಣನೆಗೆ ತೆಗೆದುಕೊಂಡು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 22 ವರ್ಷಗಳ ನಂತರ ಸಮ್ಮತಿ ಶುಲ್ಕ ಪರಿಷ್ಕರಣೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಸದರಿ

ಪ್ರಸ್ತಾವನೆಯನ್ನು ಪರಿಶೀಲಿಸಿ, Karnataka State Board for Prevention and Control of Water Pollution (Procedure for Transaction of Business) and The Water (Prevention and Control of Pollution) Rules, 1976 ನ ನಿಯಮ 32 ಕ್ಕೆ ತಿದ್ದುಪಡಿಯನ್ನು ಹಾಗೂ ಕರ್ನಾಟಕ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ನಿಯಮಗಳು, 1983 ನಿಯಮ 20 ಕ್ಕೆ ತಿದ್ದುಪಡಿ ತರಲು ದಿನಾಂಕ:29.10.2020 ರಂದು ಅನುಕ್ರಮವಾಗಿ ಅಧಿಸೂಚನೆ ಸಂಖ್ಯೆ: ಅಪಜೀ 251 ಇಪಿಸಿ 2016(i) ಹಾಗೂ ಅಪಜೀ 251 ಇಪಿಸಿ 2016 (ii) ಗಳಲ್ಲಿ ಹೊರಡಿಸಲಾಗಿರುತ್ತದೆ.

ಈ ಮಧ್ಯೆ, ದಿನಾಂಕ:29.10.2020 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಅಪಜೀ 251 ಇಪಿಸಿ 2016 ಗಳ ಬಗ್ಗೆ ಕೋವಿಡ್ – 19 ಲಾಕ್ ಡೌನ್ ಹಾಗೂ ಉದ್ಯಮಗಳ ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಹೆಚ್ಚಿನ ಕೈಗಾರಿಕೆಗಳು ಕೈಗಾರಿಕಾ ಸಂಘಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತವೆ. ಸದರಿ ಮನವಿಗಳನ್ನು ಪರಿಶೀಲಿಸಿ, ಕೆಲವು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಲ್ಲಿ ಹಾಲಿ ಇರುವ ಸಮ್ಮತಿ ಶುಲ್ಕದ ವಿವರಗಳನ್ನು ಪಡೆದು, ಅವುಗಳ ತುಲನಾತ್ಮಕ ಪಟ್ಟಿ ತಯಾರಿಸಿ, ಅಧ್ಯಯನ ನಡೆಸಿ, ಕೈಗಾರಿಕೆಗಳ ಕಾರ್ಯಚಟುವಟಿಕೆಗಳ ಅನುಕೂಲಕ್ಕಾಗಿ ಸಮ್ಮತಿ ಶುಲ್ಕವನ್ನು ಪರಿಷ್ಕರಿಸಲು ಮಂಡಳಿಯು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಗಣಿಸಿ, ದಿನಾಂಕ 22.10.2021 ರಂದು ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಿ, ಸಮ್ಮತಿ ಶುಲ್ಕವನ್ನು ಇಳಿಕೆ ಮಾಡಲಾಗಿದೆ.

ಮುಂದುವರೆದು, "Karnataka Iron and Steel Manufacturer's Association, Bellary District, Karnataka" ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 21080/2021 ನಲ್ಲಿ ಸಮ್ಮತಿ ಶುಲ್ಕ ಹೆಚ್ಚಳವನ್ನು ಪ್ರಶ್ನಿಸಿದ್ದು ಮಾನ್ಯ ಉಚ್ಚ ನ್ಯಾಯಾಲಯವು ಮಧ್ಯಂತರ ತೀರ್ಪಿನಲ್ಲಿ ಈ ಕೆಳಗಿನಂತೆ ಕೋರಿರುತ್ತಾರೆ.

" As an interim relief, it is prayed to direct the Respondents to consider all pending applications for issuance/renewal of Consent to operate/under the existing Notification No. FEE 251 EPC 2016 (i) dated 22.10.2021 for Water Rules, as per Table 1 (a) of Rule 32 (2) of Water Rules, 1976, and under Notification No. FEE 251 EPC 2016 (ii), dated 22.10.2021 for Air Rules as per Table 1 (a) of Rule 20 (1) of Air Rules, 1983, both gazetted on 26.10.2021 (Annexure-G) for issuance /renewal of Consent to operate/establish/Commerce industry."

ಇದರಂತೆ, ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ:

"Interim Order as prayed for, subject to result of the Writ Petition".

ಸದರಿ ರಿಟ್ ಅರ್ಜಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿ ಇರುತ್ತದೆ.

**ಸಂಖ್ಯೆ:** ಅಪಜೀ 39 ಇಪಿಸಿ 2022

(ಆನಂದ್ ಸಿಂಗ್)
ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ
ಪ್ರವಾಸೋದ್ಯಮ ಸಚಿವರು